**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಕುಮಟಾ**

**ಸಿ ಸಿ ನಂಃ** 1987/2022

ಫಿರ್ಯಾದಿಃ ಸರಕಾರ ವಿರುದ್ಧ ಆರೋಪಿತರು:ಶ್ರೀಮತಿ ಪಾರ್ವತಿ ಗೋವಿಂದ ದೇಶಭಂಡಾರಿ ಹಾಗೂ ಇತರರು

**ದೋಷಾರೋಪಣೆ**

ಶ್ರೀ ನರೇಂದ್ರ ಬಿ. ಆರ್, ಬಿ.ಎಸ್.ಸಿ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ

ನಾನು ನಿಮ್ಮ ಅಂದರೆ –

1. ಶ್ರೀಮತಿ ಪಾರ್ವತಿ ಗೋವಿಂದ ದೇಶಭಂಡಾರಿ,
   ವಯಸ್ಸು 80 ವರ್ಷ,
2. ವಿಠ್ಠಲ್ ಗೋವಿಂದ ದೇಶಪಾಂಡೆ @ ದೇಶಭಂಡಾರಿ,
   ವಯಸ್ಸುಃ 62 ವರ್ಷ,
3. ವಿರಾಜ್ ವಿಠ್ಠಲ್ ದೇಶಪಾಂಡೆ @ ದೇಶಭಂಡಾರಿ,
   ವಯಸ್ಸುಃ 37 ವರ್ಷ,
4. ಶ್ರೀಮತಿ ವಿದ್ಯಾ@ ಅಲ್ಕಾ ವಿಠ್ಠಲ್ ದೇಶಪಾಂಡೆ @ ದೇಶಭಂಡಾರಿ,
   ವಯಸ್ಸುಃ 80 ವರ್ಷ,

ಸಾಃ ಎಲ್ಲರೂ ಹೊಂಡದಹಕ್ಕಲ, ಅಂತ್ರವಳ್ಳಿ ಕುಮಟಾ.

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ–

**1** ರಿಂದ **4** ನೇ ಆರೋಪಿತರಾದ ನೀವು ಹಾಗೂ ಪಿರ್ಯಾದಿಯವರು ಕುಮಟಾ ತಾಲೂಕ ಅಂತ್ರವಳ್ಳಿ ಗ್ರಾಮದ ಹೊಂಡದಹಕ್ಕಲ ಊರಿನ ಅಕ್ಕಪಕ್ಕದ ನಿವಾಸಿಯಾಗಿದ್ದು, **1** ನೇ ಆರೋಪಿಯಾದ ನೀವು ಪಿರ್ಯಾದಿಯವರೊಂದಿಗೆ ಹಳೆಯ ಸಿಟ್ಟಿನಿಂದ ಇದ್ದು, ದಿನಾಂಕ **27.3.2022** ರಂದು ಸಾಯಂಕಾಲ **4.30** ಗಂಟೆಯ ಸುಮಾರಿಗೆ 1 ನೇ ಆರೋಪಿಯಾದ ನೀವು 2 ರಿಂದ 4 ನೇ ಆರೋಪಿತರೊಂದಿಗೆ ತಕ್ಷೀರು ಸಮಾನ ಉದ್ದೇಶದಿಂದ ಪಿರ್ಯಾದಿಯವರ ಮನೆಯ ಹಿತ್ತಲಿಗೆ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **447 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನೀವು ತಕ್ಷೀರು ಸಮಾನ ಉದ್ದೇಶದಿಂದ ಫಿರ್ಯಾದಿಯವರನ್ನು ಉದ್ದೇಶಿಸಿ ಬೇವರ್ಸಿ 'ರಂಡೇ ಸೂಳೆ' ಅಂತಾ ಅವಾಚ್ಯ ಶಬ್ದದಿಂದ ಬೈದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **504 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ತಕ್ಷೀರು ಸಮಾನ ಉದ್ದೇಶದಿಂದ ನಿಮ್ಮಗಳ ಪೈಕಿ **2** ಮತ್ತು **3** ನೇ ಆರೋಪಿತರಾದ ನೀವು ಫಿರ್ಯಾದಿಯವರಿಗೆ ಕೈಯಿಂದ ಕೆನ್ನೆಯ ಮೇಲೆ ಹಾಗೂ ತಲೆಯ ಮೇಲೆ ಹೊಡೆದಿದ್ದಲ್ಲದೇ **1** ನೇ ಆರೋಪಿಯಾದ ನೀವು ಪಿರ್ಯಾದಿಯವರ ಮೂಗಿನ ಮೇಲೆ ಗುದ್ದಿ ಸಾದಾ ಗಾಯ ನೋವು ಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **323 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ತಕ್ಷೀರು ಸಮಾನ ಉದ್ದೇಶದಿಂದ ನಿಮ್ಮ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಫಿರ್ಯಾದಿಯವರ ಮೈಮೇಲೆ ಕೈ ಹಾಕಿ ಅವರ ಮಾನಕ್ಕೆ ಅವಮಾನಗೊಳಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **354 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ತಕ್ಷೀರು ಸಮಾನ ಉದ್ದೇಶದಿಂದ ನಿಮ್ಮಗಳ ಪೈಕಿ 4 ನೇ ಆರೋಪಿಯಾದ ನೀವು ಫಿರ್ಯಾದಿಯವರಿಗೆ ಕಟ್ಟಿಗೆಯ ಬಡಿಗೆಯಿಂದ ಬೆನ್ನಿನ ಮೇಲೆ ಹಾಗೂ ತಲೆಯ ಮೇಲೆ ಹೊಡೆದು ಸಾದಾ ಗಾಯ ನೋವು ಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **324 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ನೀವು ಮೇಲಿನ ಆರೋಪಗಳಡಿಯಲ್ಲಿ ವಿಚಾರಣೆಗೆ ಗುರಿಯಾಗ ತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿ ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬರೆದುಕೊಂಡದ್ದಾಗಿದೆಯೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ)

sd/-

ದಿಃ 2.6.2023

**(ನರೇಂದ್ರ ಬಿ. ಆರ್)**
**ಪ್ರಧಾನ ಪ್ರ.ದ.ನ್ಯಾದಂಡಾಧಿಕಾರಿ, ಕುಮಟಾ.**